# ಚರ್ಚೆಗೆ ಬನ್ನಿ: ರೈತರಿಗೆ ಪ್ರಧಾನಿ ಮೋದಿ ಆಹ್ವಾನ

## ಬೆಂಬಲ ಬೆಲೆ ಹಿಂದೆ ಇತ್ತು, ಈಗ ಇದೆ, ಮುಂದೆಯೂ ಇರಲಿದೆ

## ಹಿಂದೆ ಮನಮೋಹನ್ ಸಿಂಗ್ ಅವರೇ ಇಂಥ ಕಾಯ್ದೆ ಬೇಕೆಂದಿದ್ದರು

• ಪಿಟಿಐ ನವದೆಹಲಿ

ಕೇಂದ್ರ ಸರ್ಕಾರ ಅಂಗೀಕರಿಸಿರುವ 3 ಕೃಷಿ ಕಾಯ್ದೆಗಳನ್ನು ವಿರೋಧಿಸುತ್ತಿರುವ ರೈತರು ಪ್ರತಿಭಟನೆ ಕೈಬಿಟ್ಟು ಮಾತುಕತೆಯ ಮೇಜಿಗೆ ಬರಬೇಕು ಎಂದು ಪ್ರಧಾನಿ ನರೇಂದ್ರ ಮೋದಿ ಆಹ್ವಾನಿಸಿದ್ದಾರೆ. ಅಲ್ಲದೆ ಹೊಸ ಕೃಷಿ ಕಾಯ್ದೆಗಳ ಜಾರಿಯಿಂದ ಕೃಷಿ ಮಾರುಕಟ್ಟೆ ಸಮಿತಿ ಮತ್ತು ಕನಿಷ್ಠ ಬೆಂಬಲ ಬೆಲೆ (ಎಂಎಸ್‌ಪಿ) ವ್ಯವಸ್ಥೆ ರದ್ದಾಗಲಿದೆ ಎಂಬ ರೈತರ ಕಳವಳವನ್ನು ದೂರ ಮಾಡಿರುವ ಪ್ರಧಾನಿ, 'ಈ ಎರಡೂ ವ್ಯವಸ್ಥೆಗಳು ಹಿಂದೆಯೂ ಇದ್ದವು, ಈಗಲೂ ಇವೆ, ಮುಂದೆಯೂ ಜಾರಿಯಲ್ಲಿರಲಿವೆ' ಎಂದು ಭರವಸೆ ನೀಡಿದ್ದಾರೆ.

ಇದೇ ವೇಳೆ ಸರ್ಕಾರದ ಕೃಷಿ ಸುಧಾರಣೆಯನ್ನು ವಿಪಕ್ಷಗಳು ವಿರೋಧಿಸುತ್ತಿವೆ ಎಂದು ತರಾಟೆಗೆ ತೆಗೆದುಕೊಂಡಿರುವ ಪ್ರಧಾನಿ, ಈ ಹಿಂದೆ ಯುಪಿಎ ಸರ್ಕಾರದ ಅವಧಿಯಲ್ಲಿ ಸ್ವತಃ ಅಂದಿನ ಪ್ರಧಾನಿ ಮನಮೋಹನ್ ಸಿಂಗ್ ಅವರೇ ಇಂಥ ಸುಧಾರಣೆಗಳ ಪರ ಬ್ಯಾಟಿಂಗ್ ಮಾಡಿದ್ದರು ಎಂದು ನೆನಪಿಸಿ ಟಾಂಗ್ ನೀಡಿದ್ದಾರೆ.

ಜೊತೆಗೆ ರೈತರ ಪ್ರತಿಭಟನೆಯಲ್ಲಿ ಸಾಮಾಜಿಕ ಹೋರಾಟಗಾರರ ಭಾಗಿ ಬಗ್ಗೆ ಪ್ರಸ್ತಾಪಿಸಿ, ದೇಶದಲ್ಲೀಗ ಆಂದೋಲನ ಜೀವಿಗಳೆಂಬ ಹೊಸ ವೃತ್ತಿಪರ ಪ್ರತಿಭಟನಾಕಾರರು ಎಲ್ಲೆಡೆ ತಲೆ ಎತ್ತುತ್ತಿದ್ದಾರೆ ಎಂದು ವ್ಯಂಗ್ಯವಾಡಿದ್ದಾರೆ. ಹೋರಾಟಕ್ಕೆ ವಿದೇಶಿ ಶಕ್ತಿಗಳ ಬೆಂಬಲವನ್ನು ಪರೋಕ್ಷವಾಗಿ ಪ್ರಸ್ತಾಪಿಸಿ, ಎಫ್‌ಡಿಐ (ಫಾರಿನ್ ಡಿಸ್ಟ್ರಕ್ಟಿವ್ ಐಡಿಯಾಲಜಿ- ವಿದೇಶಿ ವಿನಾಶಕಾರಿ ಸಿದ್ಧಾಂತದ) ಬಗ್ಗೆ ಎಚ್ಚರದಿಂದಿರಬೇಕು ಎಂದು ಕರೆಕೊಟ್ಟಿದ್ದಾರೆ.

➤ 11



### ಮೋದಿ ಹೇಳಿದ್ದೇನು?

- ಕೃಷಿ ಕಾಯ್ದೆಯ ಒಳ್ಳೆ ಕೆಲಸಕ್ಕೆ ಕೈಜೋಡಿಸಿ. ಕೆಟ್ಟದ್ದು ನನಗೆ ಸೇರಲಿ. ಒಳ್ಳೆಯದರ ಶ್ರೇಯ ನಿಮಗಿರಲಿ.
- ರೈತರೇ.. ಪ್ರತಿಭಟನೆ ಕೈಬಿಡಿ, ಚರ್ಚೆಗೆ ಬನ್ನಿ ಬನ್ನಿ. ಕಾಯ್ದೆಯಲ್ಲಿ ಯಾವುದೇ ಲೋಪ ಸರಿಪಡಿಸಲು ನಾವು ಬದ್ಧ.
- ದೇಶದಲ್ಲಿ ಹೊಸದಾಗಿ ಕಾಣಿಸಿಕೊಳ್ಳುತ್ತಿರುವ 'ವಿದೇಶಿ ವಿನಾಶಕಾರಿ ಸಿದ್ಧಾಂತ' (ಎಫ್‌ಡಿಐ)ಗಳ ಬಗ್ಗೆ ಎಚ್ಚರ ಅಗತ್ಯ.
- ದೇಶದಲ್ಲೀಗ 'ಆಂದೋಲನ ಜೀವಿ'ಗಳೆಂಬ ವೃತ್ತಿಪರ ಪ್ರತಿಭಟನಾಕಾರರ ಹೊಸ ತಳಿಗಳು ತಲೆ ಎತ್ತುತ್ತಿವೆ.
- ಈ ದೇಶಕ್ಕೆ ಸಿಖ್ಖರ ಕೊಡುಗೆ ಅಪಾರ. ಅವರ ಟೀಕೆ ಸಲ್ಲದು. ಇದರಿಂದ ದೇಶಕ್ಕೆ ಯಾವುದೇ ಒಳಿತಾಗದು.

### ಚರ್ಚೆಗೆ ಸಿದ್ಧ, ಎಲ್ಲಿಗೆ ಬರಲಿ?



ನಾವು ಸರ್ಕಾರದ ಜೊತೆ ಮಾತುಕತೆ ನಡೆಸಲು ಎಂದೂ ನಿರಾಕರಿಸಿಲ್ಲ, ಈಗಲೂ ಮಾತುಕತೆಗೆ ಸಿದ್ಧರಿದ್ದೇವೆ. ಯಾವಾಗ, ಎಲ್ಲಿಗೆ ಬರಬೇಕು ಎಂಬುದನ್ನು ಸರ್ಕಾರ ತಿಳಿಸಲಿ.

• ಶಿವಕುಮಾರ್ ಕಕ್ಕಾ ರೈತ ನಾಯಕ

### ಎಂಎಸ್‌ಪಿಗೆ ಕಾಯ್ದೆ ಬೇಕು



ಕನಿಷ್ಠ ಬೆಂಬಲ ಬೆಲೆ ರದ್ದಾಗಿದೆ ಎಂದು ನಾವೂ ಹೇಳುತ್ತಿಲ್ಲ. ನಮ್ಮ ಕಳವಳ ಇರುವುದು ಎಂಎಸ್‌ಪಿ ಜಾರಿ ಕುರಿತು. ಎಂಎಸ್‌ಪಿ ಬಗ್ಗೆ ಕಾನೂನು ರೂಪಿಸಿ ಎಂಬುದು ನಮ್ಮ ಬೇಡಿಕೆ.

• ರಾಕೇಶ್ ಟಿಕಾಯತ್ ರೈತ ನಾಯಕ

26

ಚರ್ಚೆಗೆ ಬನ್ನಿ

ಕನಿಷ್ಠ ಬೆಂಬಲ ಬೆಲೆ ರದ್ದಾಗಲ್ಲ | ವದಂತಿಗಳಿಗೆ ಕಿವಿಗೊಡಬೇಡಿ: ಅನ್ನದಾತರಿಗೆ ಕೋರಿಕೆ

# ಚರ್ಚೆಗೆ ಬನ್ನಿ: ರೈತರಿಗೆ ಮೋದಿ ಆಹ್ವಾನ

೭ ಮೊದಲ ಪುಟದಿಂದ

**ಬೆಂಬಲ ಬೆಲೆ ಇರಲಿದೆ:** ರಾಷ್ಟ್ರಪತಿಗಳ ಭಾಷಣದ ಮೇಲಿನ ವಂದನಾ ನಿರ್ಣಯದ ಮೇಲೆ ರಾಜ್ಯಸಭೆಯಲ್ಲಿ ಮಾತನಾಡಿದ ಮೋದಿ, 'ಕೃಷಿ ಕಾಯ್ದೆಯಿಂದ ಕನಿಷ್ಠ ಬೆಂಬಲ ಬೆಲೆ ರದ್ದಾಗಲಿದೆ ಎಂಬ ಕಳವಳ ರೈತರಲ್ಲಿದೆ. ಆದರೆ ಕೃಷಿ ಮಾರುಕಟ್ಟೆ ಕೇಂದ್ರ ಮತ್ತು ಕನಿಷ್ಠ ಬೆಂಬಲ ಬೆಲೆ ಹಾಗೆಯೇ ಮುಂದುವರಿಯಲಿವೆ ಎಂದು ನಾನು ಭರವಸೆ ನೀಡುತ್ತೇನೆ. ಜೊತೆಗೆ ದೇಶದ 80 ಕೋಟಿ ಜನರಿಗೆ ಪಡಿತರ ವ್ಯವಸ್ಥೆ ಮೂಲಕ ನೀಡುವ ಆಹಾರ ಧಾನ್ಯಗಳು ಮುಂದುವರಿಯಲಿವೆ. ಹೀಗಾಗಿ ದಯವಿಟ್ಟು ಗಾಳಿ ಸುದ್ದಿಗಳಿಗೆ ಕಿವಿಗೊಡಬೇಡಿ. ರೈತರ ಆದಾಯ ದ್ವಿಗುಣಗೊಳಿಸುವ ನಿಟ್ಟಿನಲ್ಲಿ ಈ ಎಲ್ಲಾ ಕ್ರಮಗಳು ಅನಿವಾರ್ಯ' ಎಂದರು.

'ದೇಶದ ಶೇ.70ರಷ್ಟು ರೈತರು ಸಣ್ಣ ಪುಟ್ಟ ಜಮೀನು ಹೊಂದಿದ್ದಾರೆ. ಹೊಸ ಕೃಷಿ ಕಾಯ್ದೆಯು ಅವರಿಗೆ ತಮ್ಮ ಉತ್ಪನ್ನಗಳು ಯಾರಿಗೆ ಬೇಕಾದರೂ ಮಾರಾಟ ಮಾಡಲು ಅವಕಾಶ ಕಲ್ಪಿಸುವ ಮೂಲಕ ಗರಿಷ್ಠ ಬೆಲೆ ಪಡೆವ ಕನಸು ನನಸಾಗಲು ಅವಕಾಶ ಕಲ್ಪಿಸಿಕೊಡಲಿದೆ. ಕೃಷಿ ಕಾಯ್ದೆಗಳು ರೈತರ ಮೂಲ ಸಮಸ್ಯೆ ಬಗೆಹರಿಸುವ ಮತ್ತು ಸಣ್ಣ ರೈತರಿಗೆ



ನೆರವಾಗುವ ಉದ್ದೇಶ ಹೊಂದಿದೆ. ರೈತರಿಗೆ ಪ್ರತಿಭಟನೆಯ ಹಕ್ಕು ಇದೆಯಾದರೂ, ವೃದ್ಧರು ಪ್ರತಿಭಟನೆಗೆ ಕುಳಿತಿರುವ ರೀತಿ ಸರಿಯಿಲ್ಲ. ಹೀಗಾಗಿ ನಾನು ಮತ್ತೊಮ್ಮೆ ಮಾತುಕತೆಗೆ ಆಹ್ವಾನಿಸುತ್ತೇನೆ. ಬನ್ನಿ ನಾವು ಒಂದಾಗಿ ಮುಂದೆ ಸಾಗೋಣ. ದೇಶವನ್ನು ಮುಂದಕ್ಕೆ ಕೊಂಡೊಯ್ಯಬೇಕೇ ವಿನಾ ಹಿಂದಕ್ಕಲ್ಲ. ಎಲ್ಲಾ ಪಕ್ಷಗಳು, ಸರ್ಕಾರಗಳು ಮತ್ತು ಪ್ರತಿಭಟನಾಕಾರರು ಸುಧಾರಣೆಗಳಿಗೆ ಒಂದು ಅವಕಾಶ ನೀಡಿ ಬದಲಾವಣೆಗಳು ಲಾಭ ತರಲಿವೆಯೇ ಎಂಬುದನ್ನು ನೋಡಬೇಕು. ಯಾವುದೇ ಲೋಪದೋಷಗಳನ್ನು ಪರಿಹರಿಸಲು ನಾವು ಬದ್ಧ' ಎಂದು ಕರೆಕೊಟ್ಟರು.

'ಹೈನುಗಾರಿಕೆ ವಲಯದಲ್ಲಿ ತೊಡಗಿಕೊಂಡವರು ಖಾಸಗಿ ಸಹಭಾಗಿತ್ವದಲ್ಲಿ ಲಾಭ ಮಾಡಿಕೊಳ್ಳುತ್ತಿರುವಾಗ, ಆ ಲಾಭ ರೈತರಿಗೆ ಏಕೆ ಸಿಗಬಾರದು? ಹೈನು ಸ್ಥಾಪಿಸಿದವರು ತಮ್ಮ ಉತ್ಪನ್ನಗಳನ್ನು ವರ್ತಕರಿಗೆ ಮಾರುತ್ತಾರೆಯೋ ಹೊರತೂ ಹಸುಗಳನ್ನಲ್ಲ. ಅದೇ ರೀತಿ ರೈತರ ಜಮೀನೇನೂ ವ್ಯಾಪಾರಿಗಳ ಪಾಲಾಗುವುದಿಲ್ಲ. ವ್ಯಾಪಾರಿಗಳು ಕೇವಲ ಬೆಳೆ ಮಾತ್ರ ಖರೀದಿಸುತ್ತಾರೆ' ಎಂದರು.

**'ಎಫ್‌ಡಿಐ' ಟಾಂಗ್:** 'ದೇಶದಲ್ಲಿ ಇದೀಗ ಎಫ್‌ಡಿಐ ಎಂಬ ಹೊಸ ಸಂಗತಿ ಕಾಣಿಸಿಕೊಂಡಿದೆ. ಇಂಥ ವಿದೇಶಿ ವಿನಾಶಕಾರಿ ಸಿದ್ಧಾಂತದ ಬಗ್ಗೆ ನಾವು ಅರಿವು ಹೊಂದಿರಬೇಕು. ಇದರ ಜೊತೆಗೆ ದೇಶದಲ್ಲೀಗ ಆಂದೋಲನ ಜೀವಿಗಳೆಂಬ ಹೊಸ ಪ್ರವೃತ್ತಿಯ ಪ್ರತಿಭಟನಾಕಾರರ ಗುಂಪು ಎಲ್ಲೆಡೆ ತಲೆ ಎತ್ತುತ್ತಿದೆ. ಅವರನ್ನು ನೀವು ಯಾವ ಪ್ರತಿಭಟನೆಯಲ್ಲಿ ಬೇಕಾದರೂ ಕಾಣಬಹುದು. ಈ ಪರಾವಲಂಬಿಗಳು ಪ್ರತಿಯೊಂದು ಪ್ರತಿಭಟನೆಯನ್ನೂ ಅಪಹರಿಸಿಕೊಳ್ಳುತ್ತವೆ' ಎಂದು ವ್ಯಂಗ್ಯವಾಡಿದರು.

**ಸಿಖ್ಖರ ಅವಹೇಳನ ತಪ್ಪು:** 'ಪ್ರತಿಭಟನಾಕಾರ ಸಿಖ್ಖರನ್ನು ಖಲಿಸ್ತಾನಿ ಉಗ್ರರಿಗೆ ಹೋಲಿಸಿದ ಹಲವು ಟೀಕೆಗಳ ಬಗ್ಗೆ ಪರೋಕ್ಷವಾಗಿ ಪ್ರತಿಕ್ರಿಯಿಸಿದ ಮೋದಿ, ಪ್ರತಿಯೊಬ್ಬ ಸಿಖ್ ಬಗ್ಗೆ ದೇಶ ಗೌರವ ಹೊಂದಿದೆ. ಸಿಖ್ಖರ ಕೊಡುಗೆ ಬಗ್ಗೆ ದೇಶಕ್ಕೆ ಹೆಮ್ಮೆ ಇದೆ. ಈ ಸಮುದಾಯ ದೇಶಕ್ಕೆ ಎಲ್ಲಾ ಕೊಡುಗೆಗಳನ್ನು ಸಲ್ಲಿಸಿದೆ. ಗುರು ಸಾಹೇಬರ ಮಾತು ಮತ್ತು ಆಶೀರ್ವಾದ ಅತ್ಯಂತ ಅಮೂಲ್ಯವಾದುದು. ಆದರೆ ಈ ಕುರಿತು ಕೆಲವರು ಬಳಸಿರುವ ಪದಗಳು ಮತ್ತು ಅವರನ್ನು ದಾರಿತಪ್ಪಿಸಲು ನಡೆಸಿರುವ ಯತ್ನಗಳು ದೇಶಕ್ಕೆಂದೂ ಒಳಿತನ್ನು ಮಾಡದು' ಎಂದರು.